ಹಾಸನ ಡಿಸ್ಟ್ರಿಕ್ಟ್.

ನೋಟಿಫಿಕೇಷನ್, ತಾರೀಖು 7ನೆ ಡಿಸೆಂಬರ್ 1907ನೆ ಇಸವಿ.

ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ನಲ್ಲಿನ 8ನೆ ಸೆಕ್ಷನ್ ಪ್ರಕಾರ ಇದರ ಕೆಳಗೆ ಕಾಣಿಸಿ ಇರುವ ಚತುರ್ಹದ್ದಿನಲ್ಲಿ ಕೇರುವ ಪ್ರದೇಶವನ್ನು ಹಾಸನ ಟವ್ನ ಮ್ಯುನಿಸಿಪಲ್ ಎಲ್ಲೆಯೊಳಗೆ ಕೇರಿಸಲು ಉದ್ದೇಶಿಸಿರುತ್ತೆ. ಈ ಉದ್ದೇಶಕ್ಕೆ ಆಕ್ಷೇಪಿಸುವ ಜನರೆಲ್ಲಾ ಈ ಪ್ರಸಿದ್ಧಪತ್ರಿಕೆಯ ತಾರೀಖು ಲಾಗಾಯಿತು ಎರಡು ತಿಂಗಳೊಳಗೆ ಸದರಿ ಆಕ್ಷೇಪಣೆಯನ್ನು ಕಾರಣ ಸಮೇತ ಲಿಖಿತಮೂಲಕ ಎಂ ಡಿಪ್ಯುಟಿ ಕಮಿಷನರ್ ಸಾಹೇಬರವರಲ್ಲಿ ತಿಳಿಯಪಡಿಸಿಕೊಳ್ಳತಕ್ಕದ್ದಿರುತ್ತೆ.

ಚತುರ್ಹದ್ದು :—

ಉತ್ತರಕ್ಕೆ :— ಹಾಸನ ಗ್ರಾಮದ ಸರ್ವೆ ನಂಬರು 293 ವುಳ್ಳ ಹುಣಸಿನಕೆರೆಗೆ ಪೂರ್ವಕ್ಕೆ ಅಂದರೆ ಖಾಯಂಗುತ್ತಾ ತವು ಲಾಪುರ ಗ್ರಾಮದ ದಕ್ಷಿಣ ಎಲ್ಲೆ ಲೈಕ್ ಸೇರುವ ಸ್ಥಳದಿಂದ ಮ್ಯುನಿಸಿಪಲ್ ಸರಹದ್ದು ಲೈಕ್ ಹೊರಟು, ಈಶಾನ್ಯವಾಗಿ ಖಾಯಂ ಗುತ್ತಾ ತವಲಾಪುರ ಗ್ರಾಮದ ಮೇಲ್ಕಂಡ ಎಲ್ಲೆ ಗುರ್ತಿನಲ್ಲಿ ಹೋಗಿ ಚಿಕ್ಕಕೊಂಡಗುಳ ಗ್ರಾಮದ ಸರ್ವೆ 76ನೆ ನಂಬರಿನ ಉತ್ತರ ಮೂಲೆ ಕೇರಿ, ಅಲ್ಲಿಂದ ಅದೇ ನಂಬರಿನ ದಕ್ಷಿಣಪಾರ್ಶ್ವದಲ್ಲಿ ಹೊರಟು, ಹಾಸನ-ಸಾಲ್ಗಾಮೆ ರಸ್ತೆ ದಾಟಿ, ಈಶಾನ್ಯಾಭಿಮುಖವಾಗಿ ಚಿಕ್ಕಕೊಂಡಗುಳ ಗ್ರಾಮದ ಸರ್ವೆ 75, 125, 124, 123ನೆ ನಂಬರುಗಳ ದಕ್ಷಿಣ ಪಾರ್ಶ್ವದಲ್ಲಿ ಹೋಗಿ, ಜೋಡಿ ಸತ್ಯಮಂಗಲ ಗ್ರಾಮದ ಎಲ್ಲೆಗೆ ಕೇರುತ್ತದೆ. ಈ ಸ್ಥಳವೇ ಮ್ಯುನಿಸಿಪಲ್ ಸರಹದ್ದಿಗೆ ಕೇವಲ ಈಶಾನ್ಯ ಪ್ರದೇಶ.

ಪೂರ್ವಕ್ಕೆ.—ಮೇಲ್ಕಂಡ ಸ್ಥಳದಿಂದ ಸದರಿ ಎಲ್ಲೆ ಲೈಕ್ ಹೊರಟು ದಕ್ಷಿಣಾಭಿಮುಖವಾಗಿ ಇಳಿದು ಜೋಡಿ ಸತ್ಯಮಂಗಲ ಗ್ರಾಮದ ಪಶ್ಚಿಮದಿಕ್ಕಿನ ಎಲ್ಲೆ ಕೂಡ ಬಂದು ಬೀರನಹಳ್ಳಿ ಗ್ರಾಮದ ಸರ್ವೆ 48ನೆ ನಂಬರಿನ ವಾಯವ್ಯ ಮೂಲೆಗೆ ಕೇರಿ ನಂತರ ಅದೇ ಗ್ರಾಮದ ಸರ್ವೆ 48, 3, 5, 7, 11ನೆ ನಂಬರುಗಳ ಪಶ್ಚಿಮಗಡಿ ಮೂಲಕವಾಗಿ ಹೋಗಿ ನಂತರ ಪೂರ್ವಕ್ಕೆ ತಿರಿಗಿ ಸ್ವಲ್ಪದೂರ ಬೆಂಗಳೂರು-ಮಂಗಳೂರು ರಸ್ತೆ ಮಾರ್ಗವಾಗಿ ಹೋಗಿ ನಂತರ ಕೆಳಕ್ಕೆ ತಿರಿಗಿ ಚನ್ನಪಟ್ಟಣದ ಕೆರೆಗೆ ವಾಯವ್ಯಕೆರೆ ಮೂಲಕವಾಗಿ ಹೋಗುತ್ತಾ ಖಂದು ಉಲಿವಾಲ-ಹಾಸನ ರಸ್ತೆ ಮೂಲಕ (ಚನ್ನಪಟ್ಟಣದ ಕೆರೆ ಪೂರ್ಣವಾಗಿ ಬಿಟ್ಟು) ಬಂದು ಚನ್ನಪಟ್ಟಣ ಗ್ರಾಮದ ಸರ್ವೆ 8ನೆ ನಂಬರಿನ ಈಶಾನ್ಯಮೂಲೆ ಕೇರುತ್ತೆ.

ದಕ್ಷಿಣಕ್ಕೆ.—ಅಲ್ಲಿಂದ ಪಶ್ಚಿಮಾಭಿಮುಖವಾಗಿ ಹೊರಟು ಚನ್ನಪಟ್ಟಣ ಗ್ರಾಮದ ಸರ್ವೆ 6, 8, 10, 16, 15ನೆ ನಂಬರುಗಳ ಉತ್ತರ ಪಾರ್ಶ್ವದ ಗಡಿ ಮೂಲಕ ಹೋಗುತ್ತಾ ಮುಂದೆ ನೈರುತ್ಯಾಭಿಮುಖವಾಗಿ ತಿರುಗಿ ಸದರಿ ಗ್ರಾಮದ ಸರ್ವೆ 17, 18, 43, 44, 45ನೆ ನಂಬರುಗಳ ಪಶ್ಚಿಮಗಡಿ ಮೂಲಕ ಹೋಗುತ್ತಾ ಬಂದು ಜೋಡಿ ಬಿಟ್ಟುಗೋನಹಳ್ಳಿ ಗ್ರಾಮದ ಆಗ್ನೇಯ ದಿಕ್ಕಿನ ಗಡಿಗೆ ಕೇರಿ ಸ್ವಲ್ಪದೂರ ಪಶ್ಚಿಮಕ್ಕೆ ತಿರುಗಿ ನಂತರ ವಾಯವ್ಯಾಭಿಮುಖವಾಗಿ ಹೊರಟು ಸದರಿ ಜೋಡಿ ಗ್ರಾಮದ ಉತ್ತರದಿಕ್ಕಿನ ಎಲ್ಲೆಯೊಡನೆ ಹೋಗುತ್ತಾ ಹಾಸನ-ಪಿರಿಯಾಪಟ್ಟಣ-ಕ್ಯಾನನೂರು ರಸ್ತೆಯನ್ನು ಹೊಂದಿ ಅದರೊಂದಿಗೆ ಕೆಲವುದೂರ ಹೊಗುತ್ತಾ ಪಶ್ಚಿಮಾಭಿಮುಖವಾಗಿ ತಿರುಗಿ ಹುಲ್ಲೇನಹಳ್ಳಿ ಗ್ರಾಮದ ಸರ್ವೆ 12, 11, 10, 9, 13ನೆ ನಂಬರುಗಳ ಉತ್ತರದಿಕ್ಕಿನ ಗಡಿ ಮುಖಾಂತ್ರ ನಡೆದು ಹಾಸನ ಕಸಬಾ ಸರ್ವೆ 457ನೆ ನಂಬರಿನ ಆಗ್ನೇಯ ಮೂಲೆಗೆ ಕೇರುತ್ತೆ.

ಪಶ್ಚಿಮಕ್ಕೆ.—ಮೇಲ್ಕಂಡ ಸ್ಥಳದಿಂದ ಹೊರಟು ಕಸಬಾ ಗ್ರಾಮದ 457, 456, 444, 443, 438, 437, 436, 435, 433ನೆ ಸರ್ವೆ ನಂಬರುಗಳ ಪೂರ್ವದಿಕ್ಕಿನ ಗಡಿ ಮೂಲಕ ಹೋಗುತ್ತಾ ಬೆಂಗಳೂರು-ಮಂಗಳೂರು ರಸ್ತೆ ದಾಟಿ ನಂತರ ಈಶಾನ್ಯಾಭಿಮುಖವಾಗಿ ಹೊರಟು ಕಸಬಾ ಗ್ರಾಮದ 385, 386, 387, 414ನೆ ಸರ್ವೆ ನಂಬರುಗಳ ಪೂರ್ವದಿಕ್ಕಿನ ಗಡಿ ಮೂಲಕ ಸಾಗಿ ನಂತರ ಸ್ವಲ್ಪ ಪಶ್ಚಿಮಕ್ಕೆ ತಿರಿಗಿ ಹುಣಸಿನಕೆರೆ ಕಸಬಾ ಸರ್ವೆ 283ನೆ ನಂಬರು ಪೂರ್ವಪಾರ್ಶ್ವದಲ್ಲಿ ಹೋಗುತ್ತಾ ಖಂದು ಖಾಯಂಗುತ್ತಾ ತವಲಾಪುರ ಗ್ರಾಮದ ನೈರುತ್ಯಗಡಿ ಮೂಲಕ ಸೇರುತ್ತದೆ.

ನರಸಿಂಗರಾವ್ ಪೂರ್ಣಯ್ಯ,
ಫಾರ್ ಮ್ಯುನಿಸಿಪಲ್ ಪ್ರೆಸಿಡೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟ್ ಟ್ರೆಜರಿ.

ಶಿವಮೊಗ್ಗ ಡಿಸ್ಟ್ರಿಕ್ಟ್ ಸೇವಿಂಗ್ಸ್ ಬ್ಯಾಂಕು ಡಿಪಾಜಿಟರುಗಳಿಗೆ ಇದರಿಂದ ತಿಳಿಯಪಡಿಸುವದೇನಂದರೆ :—

1906-07ನೆ ಸಾಲ್ ಒಡ್ಡಿ ವ್ಯಾಸು ಬುಕ್ಕುಗಳಲ್ಲಿ ದಾಖಲೆ ಮಾಡುವ ಉದ್ದೇಶ್ಯ, ಸದರಿ ವ್ಯಾಸು ಬುಕ್ಕುಗಳನ್ನು ನಿಮ್ಮ ಅಕೌಂಟುಗಳು ಇರುವ ಟ್ರೆಜರಿಯಲ್ಲಿ ಹಾಜರ್ಪಡಿಸಬಹುದು.

ಪಿ. ವೇದಾಂತದೇಸಿಗಂ ಐಯ್ಯಂಗಾರ್,
ಟ್ರೆಜರಿ ಆಫಿಸರ್.

ಬೆಂಗಳೂರು ಸಬ್ ಜಡ್ಜ್ ರವರ ಕೋರ್ಟ್‌ನಲ್ಲಿ.

ಸ್ರ 1907—08ನೆ ಇಸವಿ ಮಿ॥ ಅರ್ಜೀ ನಂಬರು 493.

ಬೆಂಗಳೂರಲ್ಲಿ ವಾಸವಾಗಿದ್ದ ಅಡ್ವೊಕೇಟ್ ಮಿ॥ ನಾರಾಯಣರಾಯರ ಹೆಂಡತಿ ಮೃತಪಟ್ಟ ರಂಗಮ್ಮನವರ ಆಸ್ತೀ ವಿಷಯದಲ್ಲಿ —

ಅರ್ಜೀದಾರರು ಬೆಂಗಳೂರಲ್ಲಿರುವ ಅಡ್ವೊಕೇಟ್, 1ನೆ ಎಸ್. ನಾರಾಯಣರಾವ್, 2ನೆ ಎಸ್ ರಾಮಕೃಷ್ಣರಾವ್, 3ನೆ ನಂಜನರಸಮ್ಮ, ಮೃತಪಟ್ಟ ಸದರೀ ರಂಗಮ್ಮನವರಿಗೆ ಖಾಸಾ ಗಂಡ ಮತ್ತು ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ

ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ರಂಗಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 3,500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ನಾರಾಯಣರಾಯರು ವಗೈರೇರ ಅರ್ಜಿಯನ್ನು ಸ್ ೧೯೦೭ನೆ ಇಸವಿ ಡಿಸೆಂಬರು ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೭ನೆ ಇಸವಿ ಡಿಸೆಂಬರ್ ತಿಂಗಳು 6ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೭—೦೮ನೆ ವಿ॥ ಅರ್ಜೀ ನಂಬರ್ 500.

ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿ ಹುಲಿಮಂಗಲದಲ್ಲಿ ವಾಸವಾಗಿದ್ದ ಮೃತಪಟ್ಟ ಅಪ್ಪಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿ ನಡುಬೀದಿ ಅಪ್ಪಯ್ಯನ ಮಗಳು ತಿಮ್ಮಕ್ಕ, ಮೃತಪಟ್ಟ ಸದರೀ ಅಪ್ಪಯ್ಯನವರಿಗೆ ಖಾನ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಹುಲಿಮಂಗಲದಲ್ಲಿದ್ದು ಮೃತಪಟ್ಟ ಅಪ್ಪೈಯ್ಯನವರ ಬಿಂದಗಿ ಬಗ್ಯಾಗಿ ಬರತಕ್ಕ 40 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರಿ ದರಖಾಸ್ತುದಾರರಾದ ತಿಮ್ಮಕ್ಕನ ಅರ್ಜಿಯನ್ನು ಸ್ ೧೯೦೭ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಪ್ಪೈಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೭ನೆ ಇಸವಿ ಡಿಸೆಂಬರ್ ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರಿ ನಿತ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಜೆ. ಎಚ್. ಭಾಭಾ,
ಸಬ್ ಜಡ್ಜ್.

ಬೆಂಗಳೂರು ಅಡಿಪನಲ್ ಮುನ್ಸೀಫ್ ಕೋರ್ಟು.

O. S. 328 of 1907—08.

ವಾದಿ. ಕುಂಟ ಲಿಂಗೇಗೌಡ.

ಪ್ರತಿವಾದಿ. ಚಲುವೇಗೌಡ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮೇಲ್ಕಂಡ ಅಸಲ್ ನಂಬರು ನೊಕ್ಕದ್ದಮೆಯಲ್ಲಿ ವಾದಿಯು ಪ್ರತಿವಾದಿಯ ಮೇಲೆ ವಾದಿಯ ಹಿಡುವಳೀ ಬಾಬ್ತು ಷೆಡ್ಯೂಲು ಜಮೀನಿನಲ್ಲಿ 1904ನೆ ಇಸವಿ ನವಂಬರು 14ನೆ ತಾರೀಖಿನಲ್ಲಿ ಅಗತೇ ಮಾಡುವಾಗ ಶಿಕಿ ದ ಭಂಗಾರದ ಹಣ ಚಿಂತಾಕು ವಗೈರೆ ನಗಗಳ ಬಾಬತು 400 ರೂಪಾಯಿಗಳು ಪ್ರತಿವಾದಿಯಿಂದ ಬರ ಮಾಡಿಸಿಕೊಡಬೇಕೆಂದು ದಾವಾ ಮಾಡಿರುವದರಿಂದ ಸದರೀ ಭೂಮಿಯಲ್ಲಿ ಶಿಕ್ಕಿರತಕ್ಕ ಭಂಗಾರದ ನಾಣ್ಯ ಮತ್ತು ಒಡವೇ ವಿಚಾರದಲ್ಲಿ ಮತ್ಯಾರಿಗಾದರೂ ಹಕ್ಕು ಬಾಧ್ಯತೆ ಇರುವಪಕ್ಷದಲ್ಲಿ 1908ನೆ ಇಸವಿ ಜನವರಿ 16ನೆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಕೋರ್ಟಿಗೆ ಹಾಜರಾಗಿ ತಿಳಿಸತಕ್ಕದ್ದು.

D. K. Rama Rao, *Additional Munsiff.*

ಷಡ್ಯೂಲ್.

ಚನ್ನಪಟ್ಟಣದ ತಾಲ್ಲೂಕು ಮಳೂರು ಹೋಬಳಿ ಕಸಬಾ ಬಳಿ ಸರ್ವೇ 602ನೆ ನಂಬರು ವಾದಿಯ ಹಿಡುವಳಿ ಜಮೀನಿಗೆ ಚಕ್ಕುಬಂದಿ—ಪೂರ್ವಕ್ಕೆ ನಂಜೇಗೌಡನ ತೋಟ, ಪಶ್ಚಿಮಕ್ಕೆ ಕಾರೇಮೋಳ, ದಕ್ಷಿಣಕ್ಕೆ ನೀರು ಮೊಗಿಯುವ ಈಟ್ಟೆ, ತಿಮ್ಮೇಗೌಡನ ತೆಂಗಿನ ತೋಟ, ಜನಗಳ ಹುಲ್ಲು ಹಿತ್ತಲು ಸಹ, ಉತ್ತರಕ್ಕೆ ವೆಂಕಟಗಿರಿ ಗೌಡನ ಹೊಲ ಉಪ್ಪುನೇರಳೆ ತೋಟ ಸಹ—ಈ ಮಧ್ಯೆ ಇರುವ ಜಮೀನು.

D. K. Rama Rao, *Additional Munsiff.*

ಅಮೃತಮಹಲ್ ಇಲಾಖಾ.

ಪ್ರಕಟನೆ.

ಮೊಕ್ಕಾಂ ಹೊಳಲೆರೆ, ತಾರೀಖು 25—27ನೆ ನವಂಬರ್ 1907.

ಅಮೃತಮಹಲ್ ಇಲಾಖಾ ಬಾಬತು ಕೆಲವು ಗಂಡುರಾಸುಗಳನ್ನ ಚಾಲ್ತಿ ಇಸವಿ ಡಿಸೆಂಬರು 10ನೆ ತಾರೀಖು ಲಾಗಾಯಿತು ತಿಪಟೂರು ತಾಲ್ಲೂಕು ಕೊನೆಹಳ್ಳಿ ರೈಲ್ವೆ ಸ್ಟೇಷ್ನ ಬಳಿಯಲ್ಲೂ ಅದೇ ಮಾಹೆ 15ನೆ ತಾರೀಖು ಲಾಗಾಯಿತು ಹಾಸನ ತಾಲ್ಲೂಕು ದುದ್ದದ ಮೊಕ್ಕಾಂನಲ್ಲೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಸದರಿ ಸ್ಥಳಗಳಿಗೆ ಹಾಜರಾಗಿ ಛಡ ಸವಾಲಿನಲ್ಲಿ ರಾಸುಗಳನ್ನ ಪಡಿಯಬಹುದು.

ಹೆಚ್. ನಂಜುಂಡರಾಜೇ ಅರಸ್,
ಸೂಪರ್‌ಟಿಂಡೆಂಟ್.